ಅಸಲು ದಾವಾ ನಂ.55/2017
ಡಿ ಡಬ್ಲ್ಯು-14

ದಿನಾಂಕ: 10-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲು:- ವಾದಿ ಪರ ಶ್ರೀ. ಎನ್ ಆರ್ ಬಿ ವಕೀಲರಿಂದ.</u>**

ನಾನು ಶಾಲೆ ಕಲಿತಿಲ್ಲ. ವಾದಿಯರು ನನ್ನ ವಿರುದ್ಧ ಏನು ಪರಿಹಾರ ಬೇಡಿ ದಾವೆ ಸಲ್ಲಿರುತ್ತಾರೆ ಎಂದು ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ನಂ.1 ಇವರ ಮನೆತನದ ಮಾಹಿತಿ ಗೊತ್ತಿರುತ್ತದೆ. ದತ್ತಾತ್ರೇಯ ಮತ್ತು ಗುರುರಾವ್ ಕುಲಕರ್ಣಿ ಇವರು ಸಹೋದರರು ಎಂದರೆ ಸರಿ. ವಿನಾಯಕರಾವ್ ಹನುಮಂತರಾಯರ ತಮ್ಮನ ಮಕ್ಕಳು ಎಂದರೆ ಸರಿ. ದತ್ತಾತ್ರೇಯ ಮತ್ತು ಗುರುರಾವ್ ಕುಲಕರ್ಣಿ, ವಿನಾಯಕರಾವ್ ಇವರ ಮನೆಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ದಾವಾ ಆಸ್ತಿ ಕ್ಷೇತ್ರ 05 ಎಕರೆ 19 ಗುಂಟೆ ಎಂದರೆ ಸರಿ. ಇದರಲ್ಲಿ ದತ್ತಾತ್ರೇಯ ಇವರಿಗೆ 27 ಗುಂಟೆ, ಗುರುರಾವ್ ಇವರಿಗೆ 27 ಗುಂಟೆ ಹಾಗೂ ವಿನಾಯಕರಾವ್ ಇವರಿಗೆ 03 ಎಕರೆ 13 ಗುಂಟೆ ಕ್ಷೇತ್ರ ಪಾಲಿನಲ್ಲಿ ಬಂದಿರುತ್ತದೆ ಎಂದರೆ ಸರಿ. ವಿನಾಯಕರಾವ್ ಇವರ ಹಿಸ್ಸೆಗೆ ಬಂದ 03 ಎಕರೆ 13 ಗುಂಟೆ ಜಮೀನು ಮಾತ್ರ ದಾವಾದ ಆಸ್ತಿ ಎಂದರೆ ಸರಿ. ದಾವಾದ ಆಸ್ತಿಯು ವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯು ಈ ಹೊತ್ತಿನವರೆಗೂ ವಾದಿಯರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ನೋಡಿರುತ್ತೇನೆ. ನಿಪಿ-3 ರಂತೆ ಪಹಣಿಯಲ್ಲಿ ವಾದಿಯರ ಹೆಸರು ನಮೂದು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಯಾವ ವರ್ಷದಲ್ಲಿ ಬಿನ್ ಶೇತ್ಕಿ ಆಗಿರುತ್ತದೆ ಎಂದು ಗೊತ್ತಿಲ್ಲ. ನಾವು ಬಿನ್ ಶೇತ್ಕಿ ಜಾಗೆಯನ್ನು ಖರೀದಿ ಹಿಡಿದಿರುತ್ತೇವೆ. ಖರೀದಿ ಪತ್ರದಲ್ಲಿ ಬಿನ್ ಶೇತ್ಕಿ ಎಂದು ಎಲ್ಲಿಯೂ ನಮೂದಿಸಲಾಗಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ದಾವಾ ಆಸ್ತಿಯ ಸರ್ವೇ ನಂಬರ ಬರೆದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖರೀದಿ ಪತ್ರಗಳು ಪಹಣಿಯ ಮೇಲೆ ಬದಲಾವಣೆ ಹೊಂದಿಲ್ಲ ಎಂದರೆ ಸರಿಯಲ್ಲ. ವಾದಿಯರ ಹೆಸರಿಗೆ ಹಾಗೇ ಪಂಚಾಯತಿ ಉತಾರೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಹಾಗೇ ಮೂಲ ಮಾಲೀಕರ ಹೆಸರಿನಲ್ಲಿ ಪಂಚಾಯತಿ ಉತಾರೆಗಳನ್ನು ಹಾಜರುಪಡಿಸಿಲ್ಲ. ಹಾಗೇ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

2. ಖರೀದಿ ಪತ್ರವು 2007 ರಲ್ಲಿ ನೋಂದಣಿಯಾಗಿರುತ್ತದೆ. ನಾವು ಖರೀದಿ ಹಿಡಿಯುವಾಗ ವಿನಾಯಕರಾವ್ ಇವರ ಮಕ್ಕಳು ಪ್ರಾಪ್ತ ವಯಸ್ಕರು ಆಗಿದ್ದರು ಎಂದರೆ ಸರಿ. ಖರೀದಿ ಪತ್ರಕ್ಕೆ ವಿನಾಯಕರಾವ್ ಇವರ ಮಕ್ಕಳ ಸಹಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ. ಖರೀದಿ ಮಾತುಕತೆಯು ಖರೀದಿ ಹಿಡಿಯುವ ಒಂದು ವಾರದ ಹಿಂದೆ ಮಾತುಕತೆ ಆಗಿತ್ತು. ಹಾಗೇ ಮಾತುಕತೆಯಾಗುವಾಗ ಹಿರಿಯರು ಇದ್ದರು, ಅವರ ಹೆಸರು ನೆನಪಿಲ್ಲ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯರ ಹಕ್ಕಿಗೆ ಸದರಿ ಖರೀದಿ ಪತ್ರ ಬಂಧನಕಾರಕ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ನಾನು ಇಲ್ಲ ಎಂದರೆ ಸರಿಯಲ್ಲ. ನಾನು ಸರ್ವೇ ನಂ.164 ನೇದ್ದನ್ನು ಖರೀದಿ ಹಿಡಿದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಸದರಿ ಸಂಖ್ಯೆ ನಮೂದು ಇಲ್ಲ ಎಂದರೆ ಸರಿಯಲ್ಲ. ವಾದಿಯರ ಮನೆತನಕ್ಕೆ ಯಾವುದೇ ಹಣದ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ವಾದಿಯರು ಕೆಲವೊಬ್ಬರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಹೇಳಿದ್ದು, ಹಾಗೇ ಆ ಪಕ್ಷಗಾರರ ಹೆಸರು ಹೇಳಲು ಬರುವುದಿಲ್ಲ. ವಾದಿಯರಿಗೆ ಹಿಸ್ಸೇ ಹೋಗುತ್ತದೆ ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).